





ತುಂಡಾಗುವ ಸಂಭವವಿದೆ. ತುಂಬ ನಾಜೂಕಿನ ಕೆಲಸ ಇದು. ಮಧ್ಯದಲ್ಲಿ ಒಂದು ದೊಡ್ಡ ಗುಂಡಗಿನ ಹರಳನ್ನು ಬಳಸಬಹುದು, ಪದಕವನ್ನು ಧರಿಸಬಹುದು, ತಮ್ಮ ಮನೋಭಿಲಾಷೆಯಂತೆ ವಿನ್ಯಾಸವನ್ನು ಮಾಡಿಸಿ ಹಾಕಿಕೊಳ್ಳಬಹುದು. ಇದು ಎಲ್ಲ ಹಾರದಂತಿರದೆ ಸ್ವಲ್ಪ ವಿಭಿನ್ನವಾದ ಹಾರ. ಇತ್ತೀಚೆಗೆ ವಿನ್ಯಾಸಗೊಂಡ ಅಪರೂಪದ ಹಾರ.

### ಹರಳುಗಳ ಗಾಂಚು ಗುಚ್ಛ ಸರ

ಪುಟ್ಟ ಪುಟ್ಟ ಹರಳುಗಳನ್ನು ಗಾಂಚು ಸರಿಗೆಯಲ್ಲಿ ನುಣುಪಾಗಿ ಪೋಣಿಸಿ 6 ರಿಂದ 10 ಸುತ್ತುಗಳನ್ನು ಒಂದರ ನಂತರ ಒಂದರಂತೆ ಪೋಣಿಸಬೇಕು. ಎಳೆಗಳು ಭದ್ರವಾಗಿದ್ದು ಒಂದೇ ಬಣ್ಣದ ಹರಳುಗಳನ್ನು ಬಳಸಬಹುದು. ಮುತ್ತು, ಹವಳ, ಎಮರಾಲ್ಡ್, ರೂಬಿ ಹೀಗೆ ಬೇರೆ ಬೇರೆ ಬಣ್ಣದ ನವರತ್ನಗಳನ್ನು ಒಂದರ ಅನಂತರ ಒಂದೊಂದು ಇಂಚು ಅಂತರದಲ್ಲಿ ಬಣ್ಣ ಬೇರೆ ಬೇರೆ ಇರುವಂತೆ ಬಳಸಿ ವಿನ್ಯಾಸಗೊಳಿಸಬಹುದು. ಎಳೆ ಎಳೆಯಾದ ಈ ಸರವನ್ನು ಒಂದು ಮೋಪ್ ಸಹಾಯದಿಂದ ಅಥವಾ ಒಂದು ಜುಮುಕಿಯ ಸುತ್ತಲೂ ಹತ್ತಿರ ಹತ್ತಿರವಾಗಿ ಜೋಡಿಸಿ, ಆಭರಣ ಒಪ್ಪ ಓರಣವಾಗಿ ತಯಾರಿಸಬಹುದು. ಜುಮುಕಿಯಲ್ಲಿ ಅನ್‌ಕಟ್ ಡೈಮಂಡ್ ಅನ್ನು ಬಳಸಬಹುದು. ಹಿಂಬದಿ ಚೈನ್ ಅಥವಾ ದೊಡ್ಡ ಹರಳುಗಳ ಸರವನ್ನೂ ಧರಿಸಬಹುದು. ಆಭರಣದ ಎಳೆಗಳು ಜಾಸ್ತಿ ಇದ್ದಷ್ಟು ಅದರ ಅಂದ ಹೆಚ್ಚು. ನವರತ್ನದ ಎಲ್ಲಾ ಹರಳುಗಳನ್ನು ಬಳಸಿದ ಹಾರ ಶ್ರೇಷ್ಠ. ಎಲ್ಲಾ ಬಣ್ಣದ, ಹರಳುಗಳು ಬೇಡ ಎಂದರೆ ನಮಗೆ ಬೇಕಾದ ಬಣ್ಣದ ಜಾತಿಯ ಹರಳುಗಳನ್ನು ಆರಿಸಿ ತಯಾರಿಸಿದ ಹಾರವನ್ನು ಧರಿಸಬಹುದು. ಅವರವರ ಭಾವಕ್ಕೆ ತಕ್ಕಂತೆ ನವರತ್ನದಲ್ಲಿ ಇರುವ ನವ ವಿಧ ಬಣ್ಣಗಳಲ್ಲಿ ಬೇಕಾದ ಹರಳನ್ನು ಆರಿಸಿ ಸರ ಮಾಡಬಹುದು.

ಇಂದು ಕೆಲವು ಬಟ್ಟೆಗಳಿಗೆ ಸರ, ಎರಡೆಳೆ ಸರ, ಹಾರಮ್ ಹೊಂದಿಕೊಂಡರೆ, ಸೀರೆ, ಚೋಲಿ ಲೆಹೆಂಗಾದಂತಹ ಬಟ್ಟೆಗಳಿಗೆ ನೆಕ್ಲೇಸ್ ಅದ್ಭುತವಾಗಿ ಕಾಣುತ್ತದೆ. ನವವಿಧ ಹರಳುಗಳು ಬಳಸಿ ಮಾಡಿದ ನೆಕ್ಲೇಸ್ ಕುತ್ತಿಗೆಯಲ್ಲಿ ಶೋಭಿಸುತ್ತದೆ. ಸಾಧಾರಣವಾಗಿ ಚಿಕ್ಕ ಚಿಕ್ಕ ಹರಳುಗಳನ್ನು ನವಿಲು, ಪುಷ್ಪಗುಚ್ಛ ಹೀಗೆ ವಿಧ ವಿಧದ ವಿನ್ಯಾಸದ ನೆಕ್ಲೇಸ್‌ನಲ್ಲೂ ಪದಕಗಳನ್ನು ಅಳವಡಿಸಿ ಧರಿಸಬಹುದು. ಇದು ಬಹಳ ಆಡಂಬರವಾಗಿ, ದೊಡ್ಡ ಮೊತ್ತದ ಸರದಂತೆ ಗೋಚರಿಸುತ್ತದೆ. ಪದಕಕ್ಕೆ ಹುಕ್ ಇದ್ದರೆ ಅದೇ ಪದಕವನ್ನು ನವರತ್ನದ ಹಾರಮ್‌ಗಳಿಗೂ ಅಳವಡಿಸಿ ಧರಿಸಬಹುದು. ಆಗ ಎರಡು ಸರಕ್ಕೂ ಬಳಸುವ ಆಭರಣ ನಮ್ಮ ಕೈಯಲ್ಲಿರುತ್ತದೆ. ನವರತ್ನದ ಹರಳುಗಳಲ್ಲಿ ಅದರ ಗಾತ್ರ, ಬಣ್ಣ ನೋಟದ ಮೇಲೆ ಬೆಲೆ ನಿರ್ಧಾರವಾಗುತ್ತದೆ. ಕಡಿಮೆ ಬೆಲೆಯಲ್ಲಿ ಖರೀದಿಸ ಬಯಸುವವರು ಚಿಕ್ಕ ಚಿಕ್ಕ ಹರಳುಗಳಲ್ಲಿ ತಯಾರಿಸಿದ ದೊಡ್ಡ ನೆಕ್ಲೇಸ್, ಹಾರಮ್‌ಗಳನ್ನು ಖರೀದಿಸಬಹುದು. ಇದು ಕೈಗೆಟುಕುವ ದರದಲ್ಲಿರುತ್ತದೆ.




ಶ್ರೀ ದುರ್ಗಾ ಪರಮೇಶ್ವರಿ ಜ್ಯೋತಿಷ್ಯಾಲಯ



ಉಚಿತ ಭವಿಷ್ಯ ಶಾಶ್ವತ ಪರಿಹಾರ

ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ವಿವಾಹ, ಸಂತಾನ ಯೋಗ, ಸ್ತ್ರೀಪುರುಷ ಪ್ರೇಮವಿಚಾರ, ವಶೀಕರಣ, ಅತ್ತೆ-ಸೊಸೆ ಕಲಹ, ಗಂಡ-ಹೆಂಡತಿ ಕಿರಿಕಿರಿ, ಕೋರ್ಟ್‌ಕೇಸ್, ಶತೃಕಾಟ, ಸಾಲಬಾದೆ, ರಾಜಕೀಯ, ವಾಹನಯೋಗ, ಭೂಮಿಯಲ್ಲಿ ತೊಂದರೆ, ಮನೆಯಲ್ಲಿ ಅಶಾಂತಿ, ಲೈಂಗಿಕ ತೊಂದರೆ, ಮಾಟ-ಮಂತ್ರ,

ಇನ್ನೂ ಅನೇಕ ಸಮಸ್ಯೆಗಳಿಗೆ ಶ್ರೀದುರ್ಗಾಪರಮೇಶ್ವರಿ ದೇವಿ ದೈವ ಹೋಮ ಹವನದಿಂದ 5 ದಿನಗಳಲ್ಲಿ ಶಾಶ್ವತ ಪರಿಹಾರ.

ನಿಮ್ಮ ಸುಖ:ದುಃಖ ಸರ್ವ ಸಮಸ್ಯೆಗಳಿಗೆ ನುಡಿದಂತೆ ನಡೆಯುವುದು

ಪಂಡಿತ್. ಸುರೇಶ್ ಭಟ್

ಫೋನಿನ ಮೂಲಕ ತಿಳಿಸುತ್ತಾರೆ

9900305071